ವಿಶೇಷ ಸೂಚನೆ:

- ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ನೋಂದಣಿ ಕಾರ್ಯ ದಿನಾಂಕ:14.12.2015ರ ಸಂಜೆ 6.00 ಗಂಟೆಯಿಂದ 15.12.2015ರ ಬೆಳಿಗ್ಗೆ 10.00 ಗಂಟೆಯವರೆಗೆ ಮಾಡಿಕೊಳ್ಳಲಾಗುವುದು. ದಿನಾಂಕ:14.12.2015ರ ಸಂಜೆಗೆ ಆಗಮಿಸುವವರು ಮುಂಚಿತವಾಗಿ ನೋಂದಣಿ ನೋಡಲ್ ಅಧಿಕಾರಿಯವರಿಗೆ ಮಾಹಿತಿ ನೀಡುವುದು.
- ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು & ಮೇಲ್ವಿಚಾರಕರಿಗೆ ಮಾತ್ರ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಮಕ್ಕಳೊಂದಿಗೆ ಪೋಷಕರು ಬಂದಿದ್ದಲ್ಲಿ ಪ್ರತ್ಯೇಕ ವಸತಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.
- ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ತಲುಪಲು ಉಡುಪಿ ಬಸ್ ನಿಲ್ದಾಣ ಹಾಗೂ ರೈಲ್ವೇ ನಿಲ್ದಾಣದಿಂದ ಬಸ್ಸಿನ ವ್ಯವಸ್ಥೆಯನ್ನು ಮಾಡಲಾಗಿದ್ದು, ಈ ಬಗ್ಗೆ ಸಾರಿಗೆ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು.
- ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣಿಸುವವರು ಮಂಗಳೂರು ಹಾಗೂ ಉಡುಪಿ ಮಧ್ಯೆ ರಾಷ್ಟ್ರೀಯ ಹೆದ್ದಾರಿ–66 ಕಾಪುವಿನಲ್ಲಿ ಕೋರಿಕೆ ನಿಲುಗಡೆಗೆ ಅವಕಾಶ ಮಾಡಿಕೊಡಲಾಗಿರುತ್ತದೆ.
- ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಕಲಿಸಲಾಗಿದ್ದು , ಲಘು ಹೊದಿಕೆ ಮಾತ್ರ ತರುವದು.
- ಸ್ಪರ್ಧೆಗಳ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದ್ದು, ನಿಗದಿತ ಸಮಯಕ್ಕೆ ಸ್ಪರ್ಧೆಗಳು ನಡೆಯುವ ಸ್ಥಳಕ್ಕೆ ಸ್ಪರ್ಧಾಳುಗಳು ನೋಂದಣಿ ಮಾಡಿಕೊಳ್ಳತಕ್ಕದ್ದು
- 2015ನೇ ಮಾರ್ಚ್ – ಏಪ್ರಿಲ್ ಮಾಹೆಯಲ್ಲಿ ನಡೆದ ಎಸ್.ಎಸ್ಎಲ್.ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರತೀ ಜಿಲ್ಲೆಯಿಂದ ಕನ್ನಡ ಮಾಧ್ಯಮದ ಒಬ್ಬ ಬಾಲಕ ಹಾಗೂ ಒಬ್ಬ ಬಾಲಕಿಗೆ ಸನ್ಮಾನಿಸಲಾಗುವುದು. ಈ ವಿದ್ಯಾರ್ಥಿಗಳಿಗೆ ದಿನಾಂಕ:16.12.2015ರಂದು ಉಚಿತವಾಗಿ ಉಡುಪಿ ಜಿಲೆಯ ಪ್ರಮುಖ ಪ್ರವಾಸಿ ತಾಣಗಳನ್ನು ತೋರಿಸಲು ಒಂದು ದಿನದ ಪ್ರವಾಸ ಏರ್ಪಡಿಸಲಾಗಿರುತ್ತದೆ ಈ ಬಗ್ಗೆ ಪ್ರವಾಸಿ ಕನ್ಸಲ್ಟೆಂಟ್ ಶ್ರೀ ಚೇತನ್ ಇವರ ಮೊಬೈಲ್ ಸಂಖ್ಯೆ 9844535509ನ್ನು ಸಂಪರ್ಕಿಸುವುದು.
- ಜಿಲ್ಲಾಮಟ್ಟದಲ್ಲಿ ಆಯ್ಕೆಯಾದ ಮಕ್ಕಳ ಪಟ್ಟಿಯನ್ನು ಕಳುಹಿಸದಿದ್ದಲ್ಲಿ, ತಕ್ಷಣ ಕಳುಹಿಸುವುದು.

ಉಪನಿರ್ದೇಶಕರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ
ರಜತಾದ್ರಿ ಮಣಿಪಾಲ-576104,
ಉಡುಪಿ ಜಿಲ್ಲೆ

Email-Id:ddpi.edu.karudup@nic.in, ದೂರವಾಣಿ ಸಂಖ್ಯೆ : 0820-2574970

ಸಂಖ್ಯೆ :ಬಿ3/ರಾ.ಮ.ಪ್ರ.ಕಾ./2015-16 ದಿನಾಂಕ : 30.11.2015

ರಿಗೆ,

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
-------------------

ಮಾನ್ಯರೇ,

ವಿಷಯ: 2015-16ನೇ ಸಾಲಿನ ರಾಜ್ಯಮಟ್ಟದ ಪ್ರೌಢಶಾಲಾ ಮಕ್ಕಳ ಪ್ರತಿಭಾ ಕಾರಂಜಿ ಸ್ಪರ್ಧಾ ಕಾರ್ಯಕ್ರಮವನ್ನು ಆಯೋಜಿಸಿರುವ ಬಗ್ಗೆ

ಉಲ್ಲೇಖ: 1. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರ ಸಂ:ನ್ಯ.ಸ.ಸಂ.ವಿ: ಪ್ರಕಾ-01 2015-16 ದಿನಾಂಕ:27.08.2015

2. ಈ ಕಚೇರಿ ಸಮ ಪತ್ರ ಸಂಖ್ಯೆ ದಿನಾಂಕ: 26.11.2015

*****************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2015-16 ನೇ ಸಾಲಿನ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧಾಕಾರ್ಯಕ್ರಮಗಳನ್ನು ಮಾನ್ಯ ಆಯುಕ್ತರ ಉಲ್ಲೇಖ(1)ರ ಪತ್ರದ ಪ್ರಕಾರ **2015ರ ಡಿಸೆಂಬರ್ 15, 16 ಮತ್ತು 17** ದಿನಾಂಕಗಳಂದು ಮೂರು ದಿನಗಳ ಕಾಲ **ವಿದ್ಯಾನಿಕೇತನ ಸಮೂಹ ವಿದ್ಯಾ ಸಂಸ್ಥೆ ಕಾಪು ಉಡುಪಿ ಜಿಲ್ಲೆ** ಇಲ್ಲಿ ಆಯೋಜಿಸಲಾಗಿದೆ. ಈಗಾಗಲೇ ಈ ಸಂಬಂಧ ತಮ್ಮ ಜಿಲ್ಲೆಯಿಂದ ಸ್ಪರ್ಧಾಳುಗಳ ಪಟ್ಟಿಗಳನ್ನು ಕಳುಹಿಸಿಕೊಡುವಂತೆ ಉಲ್ಲೇಖ(2)ರ ಪತ್ರದಲ್ಲಿ ಕೋರಲಾಗಿದೆ. ಇದರೊಂದಿಗೆ ತಮ್ಮ ಜಿಲ್ಲೆಯ ಪ್ರತಿಭಾ ಕಾರಂಜಿ ನೋಡಲ್ ಅಧಿಕಾರಿಗಳು ಹಾಗೂ ಈ ಕಾರ್ಯಕ್ರಮಕ್ಕೆ ಮಕ್ಕಳನ್ನು ಕರೆದುಕೊಂಡು ಬರುವ ಮೇಲ್ವಿಚಾರಕರ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ-1 ರಲ್ಲಿ ಕೂಡಲೇ ಈ ಕಛೇರಿಗೆ ಕಳುಹಿಸಲು ಕೋರಿದೆ. ಈ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ನೋಡಲ್ ಅಧಿಕಾರಿಯವರನ್ನು ಸಂಪರ್ಕಿಸುವುದು.

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು:**

1. **ರಾಜ್ಯಮಟ್ಟದ ಪ್ರತಿಭಾ ಕಾರಂಜಿ ನೋಡಲ್ ಅಧಿಕಾರಿಗಳು** - ಶ್ರೀ ಪಿ. ನಾಗರಾಜ್, ಡಿವೈಪಿಸಿ ಸರ್ವ ಶಿಕ್ಷಣ ಅಭಿಯಾನ ಉಡುಪಿ. ದೂರವಾಣಿ ಸಂಖ್ಯೆ: **9448999408**
2. **ಸ್ಪರ್ಧೆಗಳ ಬಗ್ಗೆ ಮಾಹಿತಿಗಾಗಿ** - ಶ್ರೀ ವಸಂತ ಶೆಟ್ಟಿ - ಶಿಕ್ಷಣಾಧಿಕಾರಿಗಳು ಅಕ್ಷರದಾಸೋಹ ದೂರವಾಣಿ ಸಂಖ್ಯೆ: 9480835614
3. **ನೋಂದಣಿಗೆ ಸಂಬಂಧಿಸಿದಂತೆ** : ಶ್ರೀ ರವಿಶಂಕರ್ ರಾವ್ - ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ನೋಂದಣಿ ಸಮಿತಿಯ ಕಾರ್ಯದರ್ಶಿ. ದೂರವಾಣಿ ಸಂಖ್ಯೆ: 9480695376
4. **ವಸತಿ ವ್ಯವಸ್ಥೆ** - ಶ್ರೀ ವಿ.ಕೆ ಉದ್ಯಾವರ್,ಆಡಳಿತಾಧಿಕಾರಿಗಳು ಶ್ರೀ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಕಾಪು ದೂರವಾಣಿ ಸಂಖ್ಯೆ: 9901731010
5. **ಸಾರಿಗೆ ವ್ಯವಸ್ಥೆ** - ಶ್ರೀ ಮನಮೋಹನ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ದೂರವಾಣಿ ಸಂಖ್ಯೆ: 9480695373

## 8 ರಿಂದ 10 ನೇ ತರಗತಿ ಪ್ರೌಢಶಾಲಾ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಸ್ಪರ್ಧೆಗಳ ರೂಪರೇಷೆಗಳು ಮತ್ತು ನಿಯಮಗಳು:

ಸ್ಪರ್ಧೆಗಳಲ್ಲಿ ವೈಯಕ್ತಿಕ ವಿಭಾಗ ಹಾಗೂ ಸಾಮೂಹಿಕ ವಿಭಾಗ ಎಂದು ವಿಂಗಡಿಸಲಾಗಿದೆ.

**ವೈಯಕ್ತಕ ವಿಷಯಗಳು : 25**

| ಕ್ರ.ಸಂ | ಸ್ಪರ್ಧಾ ವಿಷಯ | ವಿದ್ಯಾರ್ಥಿ ಸಂಖ್ಯೆ | ಕಾಲಮಿತಿ |
|---|---|---|---|
| 1 | ಭಾಷೆ: ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ, ಉರ್ದು, ಮರಾಠಿ, ತೆಲುಗು, ತಮಿಳು, ತುಳು ಮತ್ತು ಕೊಂಕಣಿ | ಭಾಷೆಗೆ – 1 ರಂತೆ | 05 ನಿಮಿಷ |
| 2 | ಧಾರ್ಮಿಕ ಪಠಣ – ಸಂಸ್ಕೃತ, ಅರೇಬಿಕ್ | ತಲಾ – 1 | 05 ನಿಮಿಷ |
| 3 | ಯೋಗಾಸನ – ಅನುಬಂಧ –1 ರಲ್ಲಿ ಹೇಳಿರುವ 5 ಆಸನಗಳ ಪ್ರದರ್ಶನ | 1 | 15 ನಿಮಿಷ |
| 4 | ಶಾಸ್ತ್ರೀಯ ಸಂಗೀತ(ಕರ್ನಾಟಕ) | 1 | 10 ನಿಮಿಷ |
| 5 | ಹಿಂದೂಸ್ಥಾನಿ ಸಂಗೀತ | 1 | 10 ನಿಮಿಷ |
| 6 | ಜಾನಪದ ಗೀತೆ | 1 | 5 ನಿಮಿಷ |
| 7 | ಭಾವಗೀತೆ | 1 | 5 ನಿಮಿಷ |
| 8 | ಭರತನಾಟ್ಯ | 1 | 10 ನಿಮಿಷ |
| 9 | ಛದ್ಮವೇಷ | 1 | 5 ನಿಮಿಷ |
| 10 | ಕ್ಲೇ ಮಾಡೆಲಿಂಗ್ | 1 | 1 ಗಂಟೆ 30 ನಿಮಿಷ |
| 11 | ಆಶುಭಾಷಣ ಸ್ಪರ್ಧೆ | 1 | 5 ನಿಮಿಷ |
| 12 | ಮಿಮಿಕ್ರಿ | 1 | 5 ನಿಮಿಷ |
| 13 | ಪ್ರಬಂಧ ರಚನೆ | 1 | 1 ಗಂಟೆ |
| 14 | ಚರ್ಚಾ ಸ್ಪರ್ಧೆ | 1 | 10 ನಿಮಿಷ |
| 15 | ಚಿತ್ರಕಲೆ | 1 | 3 ಗಂಟೆ |
| 16 | ರಂಗೋಲಿ ಸ್ಪರ್ಧೆ | 1 | 1 ಗಂಟೆ |
| 17 | ಗಝಲ್ | 1 | 5 ನಿಮಿಷ |

**<u>ಸಾಮೂಹಿಕ ವಿಷಯಗಳು – 6</u>**

| ಕ್ರ.ಸಂ | ಸ್ಪರ್ಧಾ ವಿಷಯ | ವಿದ್ಯಾರ್ಥಿ ಸಂಖ್ಯೆ | ಕಾಲಮಿತಿ |
|---|---|---|---|
| 1 | ನಾಟಕ | 8 ಜನ | 30 ನಿಮಿಷ |
| 2 | ಕ್ವಿಜ್ | 4 ಜನ (ಶಾಲಾ ತಂಡ) | 1 ಗಂಟೆ |
| 3 | ಜಾನಪದ ನೃತ್ಯ | 6 ಜನ | 10 ನಿಮಿಷ |
| 4 | ಕೋಲಾಟ | 6 ಜನ | 10 ನಿಮಿಷ |
| 5 | ಕವ್ವಾಲಿ | 4 ಜನ | 10 ನಿಮಿಷ |
| 6 | ಸ್ಥಳದಲ್ಲಿ ವಿಜ್ಞಾನದ ಮಾದರಿ ತಯಾರಿಕೆ | 2 ಜನ | 1 ಗಂಟೆ 30 ನಿಮಿಷ |

# ಪ್ರತಿಭಾ ಕಾರಂಜಿ ಸ್ಪರ್ಧಾ ವಿಷಯಗಳು

| ಕ್ರ.ಸಂ | ಸ್ಪರ್ಧೆಯ ಹೆಸರು | ವಿಷಯ |
|---|---|---|
| 1 | ಕನ್ನಡ ಭಾಷಣ | 1) ದೇಶದ ಅಭಿವೃದ್ಧಿಯಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಕೊಡುಗೆ<br>2) ಮೌಢ್ಯ ಮಾನವ ಸಮಾಜದ ಮೌನಶತ್ರು |
| 2 | ಕನ್ನಡ ಪ್ರಬಂಧ ರಚನೆ | 1) ಭಾರತದ ಸಾಂಸ್ಕೃತಿಕ ಅನನ್ಯತೆ<br>2) ಶಿಕ್ಷಣದಲ್ಲಿ ಮಾಹಿತಿ ತಂತ್ರಜ್ಞಾನ |
| 3 | ಚರ್ಚಾ ಸ್ಪರ್ಧೆ | 1)ಮೊಬೈಲ್ ಬಳಕೆ ಕಲಿಕೆಗೆ ಪೂರಕವೇ?<br>2)ಕಿರಿಯರ ಅಶಿಸ್ತಿಗೆ ಹಿರಿಯರೇ ಕಾರಣ. |
| 4 | ಇಂಗ್ಲೀಷ್ ಭಾಷಣ | 1. Challenges in Indian Diversified Culture<br>2. Contribution of Space technology in the development of country |
| 5 | ಹಿಂದಿ ಭಾಷಣ | 1. बेटी पढाओ बेटी बचाओ<br>2 देश की प्रगति में अंतरिक्ष विज्ञान की देन |
| 6 | ಚಿತ್ರ ಕಲೆ | 1) ಮುಂದಿನ ಬದುಕಿಗಾಗಿ ಉತ್ತಮ ಪರಿಸರ<br>2) ಬೀದಿ ಮನೋರಂಜನೆ |

**ಸೂಚನೆ:** ಕನ್ನಡ ಭಾಷಣದ ವಿಷಯವನ್ನೇ ಸಂಸ್ಕೃತ, ಉರ್ದು, ಮರಾಠಿ, ತೆಲುಗು, ತಮಿಳು, ತುಳು ಮತ್ತು ಕೊಂಕಣಿ ಭಾಷೆಗಳಿಗೂ ಭಾಷಾಂತರ/ ತರ್ಜುಮೆ ಮಾಡಿಕೊಂಡು ಬಳಸುವುದು.

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಉಡುಪಿ ಜಿಲ್ಲೆ, ಉಡುಪಿ

ಸ್ಪರ್ಧಾ ನಿಯಮಗಳು:

- ಭಾಷಣ, ಚರ್ಚಾ ಸ್ಪರ್ಧೆ , ಪ್ರಬಂಧ ರಚನೆ ಹಾಗೂ ಚಿತ್ರಕಲೆಗೆ : ಪ್ರತೀ ಸ್ಪರ್ಧೆಗೂ 2 ವಿಷಯಗಳನ್ನು ಇದರೊಂದಿಗೆ ನೀಡಲಾಗಿದೆ. ಆಯ್ಕೆ ಮೂಲಕ ಒಂದು ವಿಷಯವನ್ನು ಸ್ಪರ್ಧಾಳುಗಳಿಗೆ ನೀಡಲಾಗುವುದು.
- ಧಾರ್ಮಿಕ ಪಠಣ (ಸಂಸ್ಕೃತ)ಕ್ಕೆ ಸಂಸ್ಕೃತ ಭಗವದ್ಗೀತೆಯ ಯಾವುದಾದರೊಂದು ಅಧ್ಯಾಯ, ವಸ್ತುವಿನ ಆಯ್ಕೆ ಸ್ಪರ್ಧಾಳುವಿಗೆ ಸೇರಿದ್ದು.
- ಧಾರ್ಮಿಕ ಪಠಣಕ್ಕೆ ಆಯ್ಕೆ ಮಾಡಿಕೊಂಡ ವಿಷಯದ ಮೂರು ಪ್ರತಿಗಳನ್ನು ತೀರ್ಪುಗಾರರಿಗೆ ನೀಡಬೇಕು.
- ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಯಾವುದೇ ಕಾರಣಕ್ಕೂ ಧ್ವನಿ ಸುರುಳಿಗಳನ್ನು(ಕ್ಯಾಸೆಟ್) ಉಪಯೋಗಿಸಬಾರದು.
- ಯೋಗಾಸನ (15 ನಿಮಿಷ): ಯೋಗ ವಿಷಯದಲ್ಲಿ ಭಾಗವಹಿಸುವ ಸ್ಪರ್ಧಿಗಳು ಸೂಕ್ತ ಯೋಗ ಉಡುಪುಗಳನ್ನು ಧರಿಸಬೇಕು . ಸ್ಪರ್ಧಾರ್ಥಿಗಳು ಈ ಕೆಳಗಿನ 5 ಆಸನಗಳನ್ನು ಪ್ರದರ್ಶಿಸಬೇಕು
    1. ಪರಿವೃತ್ತ ತ್ರಿಕೋನಾಸನ
    2. ಜಾನುಶೀರ್ಷಾಸನ
    3. ಅರ್ಧ ಮತ್ಸೇಂದ್ರಾಸನ
    4. ಪೂರ್ಣ ಚಕ್ರಾಸನ(ಊರ್ಧ್ವ ಧನುರಾಸನ)
    5. ದ್ವಿಪಾದ ಭುಜ ಪೀಡಾಸನ
- ಶಾಸ್ತ್ರೀಯ ಸಂಗೀತ – ಕರ್ನಾಟಕ(10 ನಿಮಿಷ):
- ಹಾಡುವ ವಿಷಯಗಳಿಗೆ ಶ್ರುತಿ ವಾದ್ಯವನ್ನು ಮಾತ್ರ ಬಳಸಬೇಕು. ಲಯ ವಾದ್ಯವೂ ಸೇರಿದಂತೆ ಇತರೆ ಯಾವುದೇ ವಾದ್ಯವನ್ನು ಉಪಯೋಗಿಸುವಂತಿಲ್ಲ
- ಜನಪದ ಹಾಡಿಗೆ ನೃತ್ಯ ಮಾಡದೇ ಜನಪದ ಶೈಲಿಯ ನೃತ್ಯವನ್ನೇ ಪ್ರದರ್ಶಿಸಬೇಕು.
- ರಂಗೋಲಿ, ಚಿತ್ರಕಲೆ ಸ್ಪರ್ಧೆಗಳಿಗೆ ಬಣ್ಣ, ಬ್ರಷ್ ಇತ್ಯಾದಿ ವಸ್ತುಗಳನ್ನು ಸ್ಪರ್ಧಾಳುಗಳೇ ಒದಗಿಸಿಕೊಳ್ಳಬೇಕು.
- ಜಾನಪದ ನೃತ್ಯ , ಕೋಲಾಟ ಇವುಗಳಿಗೆ ಉಡುಪು, ವರ್ಣಾಲಂಕಾರ, ಪಕ್ಕ ವಾದ್ಯ , ಹಾಡುಗಾರಿಕೆ ಇವುಗಳನ್ನು ಸ್ಪರ್ಧಾಳುಗಳೇ ಒದಗಿಸಿಕೊಳ್ಳಬೇಕು.
- ವಿಜ್ಞಾನ ಉಪಕರಣಗಳ ತಯಾರಿಕೆಗೆ ಅಗತ್ಯವಾದ ವಸ್ತುಗಳನ್ನು ಸ್ಪರ್ಧಾಗಳಳೇ ಒದಗಿಸಿಕೊಳ್ಳಬೇಕು
- ಕ್ಲೇ ಮಾಡೆಲಿಂಗ್‌ಗೆ ಬೇಕಾದ ಮಣ್ಣನ್ನು ಒದಗಿಸಲಾಗುವುದು.

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಉಡುಪಿ ಜಿಲ್ಲೆ, ಉಡುಪಿ